**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.137/2020**

(ಚಾ.ಸಾ.4/ಪ್ರಾ.ಸಾ.3)

ತಾಃ 28.02.2024 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ಕಮಲಮ್ಮ |
| ತಂದೆಯ ಹೆಸರು | ರಾಜು |
| ವಯಸ್ಸು | 64 ವರ್ಷ |
| ಉದ್ಯೋಗ | ಗುಜರಿ ಅಂಗಡಿ ಕೆಲಸ |
| ವಾಸ ಸ್ಥಳ | ಲಗ್ಗೆರೆ |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ.1 ನನ್ನ ನಾದಿನಿಯ ಮಗ ಆಗಿರುತ್ತಾರೆ. ನನಗೆ ಒಬ್ಬನೇ ಮಗ ಹಾಗೂ ಒಬ್ಬ ಮಗಳು ಇರುತ್ತಾರೆ. ನನ್ನ ಮಗನ ಹೆಸರು ಪ್ರಸನ್ನ ಕುಮಾರ್ ಆಗಿರುತ್ತದೆ. ಸುಮಾರು 4 ವರ್ಷದ ಹಿಂದೆ ನನ್ನ ಮಗ ಪ್ರಸನ್ನ ಕುಮಾರ ಇವರು ಮಧ್ಯಾಹ್ನ 11.00 ಗಂಟೆಗೆ ಮನೆಯಿಂದ ಹೋಗಿದ್ದು 3 ದಿವಸಗಳ ನಂತರ ಅವನು ಮೃತಪಟ್ಟಿರುವ ವಿಚಾರ ತಿಳಿದು ಬಂದಿರುತ್ತದೆ. ನನ್ನ ಮಗನಿಗೆ ಬ್ಯಾಟರಾಯನಪುರ ಪೊಲೀಸ್ ಠಾಣೆಯ ಬಳಿ ಇರುವ ಪಾರ್ಕ್ ಬಳಿ ಹಲ್ಲೆ ಮಾಡಿರುತ್ತಾರೆ. ನನ್ನ

ಮಗನನ್ನು ಅಪಹರಣ ಮಾಡಿದವರ ಕಡೆಯಿಂದ ನನ್ನ ಮಗನ ಬಾಮೈದುನನಿಗೆ ಫೋನ್ ಮೂಲಕ ಇಂತಹ ಜಾಗದಲ್ಲಿ ಹೀಗೆ ಆಗಿರುವುದಾಗಿ ತಿಳಿಸಿದ್ದು ಅವರಿಂದ ನನಗೆ ತಿಳಿದು ಬಂತು. ನಂತರ ನನ್ನನ್ನು ನನ್ನ ಮಗ ಮೃತಪಟ್ಟಿದ್ದ ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತಾರೆ. ನಾನು ಕೃತ್ಯ ಸ್ಥಳಕ್ಕೆ ಹೋಗವಷ್ಟರಲ್ಲಿ ನನ್ನ ಮಗನನ್ನು ಆ್ಯಂಬುಲೆನ್ಸ್ ಗೆ ಹಾಕಿದ್ದು ನನಗೆ ತೋರಿಸಿಲ್ಲ. ನನ್ನ ಮಗನ ಮೃತದೇಹವನ್ನು ಬುಧವಾರ ನಮ್ಮ ವಶಕ್ಕೆ ನೀಡಿದ್ದು ಆತನನ್ನು ಕೊಲೆ ಮಾಡಿದ ಕಾರಣ ಮೃತಪಟ್ಟಿರುವುದು ತಿಳಿದು ಬಂದಿರುತ್ತದೆ. ನನ್ನ ಮಗನನ್ನು ಯಾರು ಯಾವ ಕಾರಣಕ್ಕಾಗಿ ಕೊಲೆ ಮಾಡಿರುತ್ತಾರೆ ಎಂದು ನನಗೆ ತಿಳಿದಿಲ್ಲ. ನಾನು ಪೊಲೀಸರಿಗೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಹೇಳಿಕೆ ನೀಡಿಲ್ಲ. ಆದರೆ ನನ್ನ ಸೊಸೆ ಹೇಳಿಕೆ ನೀಡಿರುತ್ತಾರೆ. ಈ ನ್ಯಾಯಾಲಯದ ಮುಂದೆ ಹಾಜರಿರುವ 1 ರಿಂದ 5ನೇ ಆರೋಪಿತರನ್ನು ನಾನು ನೋಡಿರುತ್ತೇನೆ. ಆರೋಪಿತರು ನನ್ನ ಮಗನಿಗೆ ಏನು ಮಾಡಿರುತ್ತಾರೆ ಎಂದು ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

2. ದಿಃ15.02.2020 ರಂದು ರಾತ್ರಿ ನನ್ನ ಮಗ ಮೀನುಗಳನ್ನು ತಂದಿದ್ದು

ಅಡುಗೆ ಆದ ಮೇಲೆ ರೂಮ್ ನಲ್ಲಿ ಎಲ್ಲರೂ ಸೇರಿ ಊಟ ಮಾಡಿದ್ದೇವು ಎಂದು ಹೇಳಿಕೆ ನೀಡಿದ್ದೇನು ಎಂದರೆ ಸಾಕ್ಷಿಯು ಆ ದಿನ ನನ್ನ ಮಗ ಊಟ ಮಾಡಿರುವುದು ನಿಜ ಎಂದು ನುಡಿದಿರುತ್ತಾರೆ. ಮಾರನೇ ದಿನ ದಿಃ16.02.2020 ರಂದು ಬೆಳಿಗ್ಗೆ 9.00 ಗಂಟೆಗೆ ನನ್ನ ಮಗ ಪ್ರಸನ್ನ ಕುಮಾರ ಬಂದಿದ್ದು ನಾನು ಆ ದಿನ ಕೆಲಸಕ್ಕೆ ಹೋಗಿ ಸಂಜೆ 6.00 ಗಂಟೆಗೆ ಮನೆಗೆ ಬಂದಿರುವುದಾಗಿ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆಗ ನನ್ನ ಮಗ ಪ್ರಸನ್ನ ಕುಮಾರ ಮನೆಯಲ್ಲಿ ಇಲ್ಲವಾಗಿ ಅವನು ಎಲ್ಲೋ ಹೋಗಿರಬಹುದು ಎಂದು ನಾವು ಸುಮ್ಮನಾಗಿದ್ದೇವು ಎಂದರೆ ಸಾಕ್ಷಿಯು ನನ್ನ ಮಗನನ್ನು ಹುಡುಕಾಡಿದೆವು ಎಂದು ನುಡಿದಿರುತ್ತಾರೆ.

3. ದಿಃ17.02.2020 ರಂದು ಬೆಳಿಗ್ಗೆ 10.30 ರಲ್ಲಿ ನನ್ನ ಮಗಳಾದ ಪುಷ್ಪಾ ಇವರು ನನಗೆ ಫೋನ್ ಮಾಡಿ ತನಗೆ ಯಾರೋ ಪೊಲೀಸರು ಎಂದು ಫೋನ್ ಮಾಡಿ ನನ್ನ ಮಗ ಪ್ರಸನ್ನ ಕುಮಾರ ಇವರನ್ನು ಮೊಬೈಲ್ ವಿಚಾರವಾಗಿ ಕರೆದುಕೊಂಡು ಹೋಗಿದ್ದು ಆತನನ್ನು ಬಿಡಬೇಕಾದಲ್ಲಿ ರೂ.5,000/- ಕೊಡಬೇಕೆಂದು ಫೋನ್ ಮಾಡಿದ್ದ ವಿಚಾರವನ್ನು ನನಗೆ ತಿಳಿಸಿದ್ದರು ಎಂದರೆ ಸಾಕ್ಷಿಯು ಅದೆಲ್ಲ ನನಗೆ ತಿಳಿದಿಲ್ಲ ಎಂದು ನುಡಿದಿರುತ್ತಾರೆ. ನಂತರ ನನ್ನ ಮಗಳು ಇದೇ ವಿಚಾರವಾಗಿ ರಾಜಗೋಪಾಲ ನಗರ ಪೊಲೀಸ್ ಠಾಣೆಗೆ ಪ್ರಸನ್ನ ಕುಮಾರ ಇವರ ಅತ್ತೆ ರೀಟಾಳೊಂದಿಗೆ ಹೋಗಿದ್ದು ಅವರು ಯಾವುದೇ ವಿಚಾರ ನನಗೆ ತಿಳಿಸಲಸಿಲ್ಲ ಎಂದು ನನಗೆ ಫೋನ್ ಮೂಲಕ ತಿಳಿಸಿದ್ದರು ಎಂದರೆ ಸರಿಯಲ್ಲ. ದಿಃ18.02.2020 ರಂದು ನಾನು, ನನ್ನ ಸೊಸೆಯಾದ ಚಾಸಾ.3 ಪುಷ್ಪಾ, ನನ್ನ ಮಗಳಾದ ಚಾಸಾ.8 ಪುಷ್ಪಾ ಹಾಗೂ ಮನು

ಇವರೊಂದಿಗೆ ಹುಡುಕುತ್ತಿದ್ದಾಗ ಅಂಜನಗರದ ಕಾಡು ರೀತಿ ಜಾಗದಲ್ಲಿ ನನ್ನ ಮಗನ ಶವ ದೊರೆತಿದ್ದು ಆತನ ಮೈ ಮೇಲೆ ಬಾಸುಂಡೆ ಹಾಗೂ ರಕ್ತ ಹೆಪ್ಪುಟ್ಟಿರುವುದು ಕಂಡು ಬಂದಿರುತ್ತದೆ ಎಂದರೆ ಸಾಕ್ಷಿಯು ನಾನು ಹೋಗಿಲ್ಲ. ಆದರೆ ನನ್ನ ಮಗಳು ಹೋಗಿದ್ದರು ಎಂದು ನುಡಿದಿರುತ್ತಾರೆ. ನಂತರ 1 ರಿಂದ 5ನೇ ಆರೋಪಿತರು ಮೊಬೈಲ್ ವಿಚಾರವಾಗಿ ನನ್ನ ಮಗ ಪ್ರಸನ್ನ ಕುಮಾರ ಆತನ ಜೊತೆ ಚಂದು, ರಾಜೇಶ್ ಇವರನ್ನು ಅಪಹರಣ ಮಾಡಿಕೊಂಡು ಹೋಗಿ ದೊಣ್ಣೆಗಳಿಂದ ಹೊಡೆದು ಗಾಯಗೊಳಿಸಿರುವುದು ನನ್ನ ಮಗನ್ನು ಸಾಯಿಸಿರುವುದು ರಾಜೇಶ್ ಇವರಿಂದ ತಿಳಿದು ಬಂತು ಎಂದು ಪೊಲೀಸರಿಗೆ ಹೇಳಿದ್ದೇನು ಎಂದರೆ ಸರಿ.

4. ಸಾಕ್ಷಿದಾರರಿಗೆ ಹೇಳಿಕೆಯ "ದಿಃ15.02.2020 ರಂದು.............. ರಕ್ತ ಹೆಪ್ಪುಗಟ್ಟಿರುತ್ತದೆ" ಹೇಳಿಕೆಯ ಭಾಗವನ್ನು ಓದಿ ತಿಳಿಸಿದ್ದು ಅದರಂತೆ ತಾನು ಹೇಳಿಕೆ ನೀಡಿಲ್ಲ ಎಂದು ಉತ್ತರಿಸಿದ್ದು ಸದರಿ ಹೇಳಿಕೆಯ ಭಾಗವನ್ನು ನಿ.ಪಿ.2 ಎಂದು ಗುರುತಿಸಲಾಯಿತು. ನಾನು ಪೊಲೀಸರಿಗೆ ನಿ.ಪಿ.2 ರಂತೆ ಹೇಳಿಕೆ ನೀಡಿದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ನುಡಿದಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ರಿಂದ 5 ನೇ ಆರೋಪಿಪರ ಶ್ರೀ.ಬಿ ಎಮ್ ಪಿ ವಕೀಲರಿಂದಃ**

5. ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆಃಇಲ್ಲ.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.